ಗದ್ದುಗೆಗೆ ಗುದ್ದಾಟ

58,616

ಮೈಸೂರಿನ ವರುಣಾ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರು 96,435 ಮತ ಪಡೆದ್ದಿದ್ದು, 58,616 ಅಂತರದಿಂದ ಗೆಲುವು ಸಾಧಿಸಿದ್ದಾರೆ. ಬಿಜೆಪಿಯಿಂದ ಬಲಿಷ್ಠ ಅಭ್ಯರ್ಥಿ ಕಣಕ್ಕಿಳಿಯದ ಕಾರಣ ಅರ್ಧ ಲಕ್ಷಕ್ಕೂ ಹೆಚ್ಚು ಮತಗಳ ಗೆಲುವು ಕಾಂಗ್ರೆಸ್ ಪಾಲಾಯಿತು. ಬಿಜೆಪಿಯ ತೋಟದಪ್ಪ 37,819 ಮತ ಪಡೆದಿದ್ದಾರೆ.

ಸಿದ್ದರಾಮಯ್ಯ

ಬಾದಾಮಿ ಮತ್ತು ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಿಎಂ ಸಿದ್ದರಾಮಯ್ಯ ಒಂದು ಕ್ಷೇತ್ರದಲ್ಲಿ ಗೆದ್ದು ಮತ್ತೊಂದು ಕಡೆ ಪರಾಭಗೊಂಡಿದ್ದಾರೆ. ಬಾದಮಿಯಲ್ಲಿ ಶ್ರೀರಾಮುಲು ವಿರುದ್ಧ 1696 ಮತಗಳ ಅಂತರದಿಂದ ಗೆಲುವಿನ ನಗೆ ಬೀರಿದ್ದಾರೆ. ಚಾಮುಂಡೇಶ್ವರಿಯಲ್ಲಿ ಜೆಡಿಎಸ್ ಅಭ್ಯರ್ಥಿ ಜಿ.ಟಿ. ದೇವೇಗೌಡ ವಿರುದ್ಧ ಸ್ಪರ್ಧಿಸಿ 32,042 ಮತಗಳ ಅಂತರದಿಂದ ಸೋತಿದ್ದಾರೆ. 1,21,325 ಮತಗಳನ್ನು ಪಡೆದಿರುವ ಜಿ.ಟಿ.ದೇವೇಗೌಡ ಜಯಭೇರಿ ಬಾರಿಸಿದ್ದು ಸಿದ್ದರಾಮಯ್ಯ ಒಟ್ಟು 85,283 ಮತಗಳನ್ನು ಪಡೆದ ಎರಡನೆ ಸ್ಥಾನ ಪಡೆದು ಪರಾಭವಗೊಂಡಿದ್ದಾರೆ.

ಟ್ವೀಟು ವಾರ

ಬಹುಜನ ಸಮಾಜ ಪಾರ್ಟಿ @BSP4Bharat

ಸಹೋದರಿ ಮಾಯಾವತಿ ಅವರು ದೇವೇಗೌಡರೊಂದಿಗೆ ಮಾತುಕತೆ ನಡೆಸಿದ್ದು, ಕರ್ನಾಟಕದಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡು ಸರಕಾರ ರಚಿಸುವಂತೆ ಜೆಡಿಎಸ್ ನಾಯಕರಿಗೆ ತಿಳಿಸಿದ್ದಾರೆ.

ನಿಖಿಲ್ ವಾಗಳೆ @waglenikhil

ದೇವೇಗೌಡ ಅವರು ಇಂದು ಕಾಂಗ್ರೆಸ್ ಬೆಂಬಲವನ್ನು ಸ್ವೀಕರಿಸುವ ಮೂಲಕ 1997ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸೀತರಾಮ್ ಕೇಸರಿ ಅವರು ಹೇಗೆ ಗೌಡರನ್ನು 10 ತಿಂಗಳ ನಂತರ ಪ್ರಧಾನಿ ಹುದ್ದೆಯಿಂದ ಕೆಳಗಿಳಿಸಿದರೋ ಅದಕ್ಕೆ ಪ್ರತೀಕಾರ ತೀರಿಸಿಕೊಂಡಿದ್ದಾರೆ. ಇದೊಂದು ಸಿಹಿ ಪ್ರತೀಕಾರವೇ?



ರಾಜದೀಪ ಸರ್‌ದೇಸಾಯಿ @sardesairajdeep

ಕರ್ನಾಟಕದಲ್ಲಿ ಇದು ಸೂಪರ್ ಓವರ್ ಸಮಯವೋ? ರಾಗಿ ಮುದ್ದೆ ಸಮಯವೋ? ಎಲ್ಲ ಮುಕ್ತಾಯದ ನಂತರ ದೇವೇಗೌಡ ಹಾಗೂ ಅವರ ಪುತ್ರ ಕುಮಾರಸ್ವಾಮಿಗೆ ಕೊನೆಯ ನಗೆ ಸಿಗುವುದೇ?

ವಿಭಾಗವಾರು

ಮೋದಿ ಅಲೆಯಲ್ಲೂ ಕರುನಾಡು ಅತಂತ್ರ

ಫಲಿಸದ ಕಾಂಗ್ರೆಸ್ ತಂತ್ರ
ಬಿಜೆಪಿಗೆ 30, ಕಾಂಗ್ರೆಸ್ 17, ಜೆಡಿಎಸ್‌ಗೆ 2 ಸ್ಥಾನ



ಬಿಜೆಪಿ ಕೈ ಹಿಡಿದ ಮುಂಬೈ ಕರ್ನಾಟಕದ ಮಂದಿ

ಸ ಪ್ರಕಾಶ ಎಸ್.ಶೇಟ್ ಹುಬ್ಬಳ್ಳಿ

ಯಾವುದೇ ಪಕ್ಷ ಆಡಳಿತಕ್ಕೆ ಬರಬೇಕಾದರೆ ಮುಂಬೈ ಕರ್ನಾಟಕದ ಮಂದಿ ನಿರ್ಣಾಯಕ ಪಾತ್ರ ವಹಿಸುತ್ತಾರೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಕಳೆದ ಬಾರಿ ಕಾಂಗ್ರೆಸ್‌ಗೆ ಬಹುಮತ ಕೊಟ್ಟಿದ್ದ ಮುಂಬೈ ಕರ್ನಾಟಕದ ಮಂದಿ, ಈ ಬಾರಿ ಬಿಜೆಪಿ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸುವ ಮೂಲಕ ಬಿಜೆಪಿ ಕೈ ಹಿಡಿದಿದ್ದಾರೆ. ಪ್ರತಿ ಚುನಾವಣೆಯ ಫಲಿತಾಂಶವನ್ನು ತುಲನೆ ಮಾಡಿ ನೋಡಿದಾಗ ಮುಂಬೈ ಕರ್ನಾಟಕದ ಮಂದಿ ನಿರ್ಧರಿಸುವ ಪಕ್ಷವೇ ಆಡಳಿತ ಚುಕ್ಕಾಣಿ ಹಿಡಿದ ಉದಾಹರಣೆಯಿದೆ. ಮುಂಬೈ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಕಳೆದ ಬಾರಿ ಉತ್ತಮ ಸ್ಥಾನಗಳಿಸಿತ್ತು. ಆದರೆ ಈ ಬಾರಿ ಮೋದಿ ಅಲೆಯಿಂದ ಕಾಂಗ್ರೆಸ್ ಮುಗ್ಗರಿಸಿದೆ.

ಆರು ಜಿಲ್ಲೆಯಿಂದ ಬಿಜೆಪಿಗೆ 30 ಸ್ಥಾನ: ಮುಂಬೈ ಕರ್ನಾಟಕ ವ್ಯಾಪ್ತಿಯ ಆರು ಜಿಲ್ಲೆಗಳಲ್ಲಿ ಬಿಜೆಪಿ 30 ಸ್ಥಾನ ಪಡೆದುಕೊಂಡಿದೆ. ಕಾಂಗ್ರೆಸ್ 17 ಸ್ಥಾನಗಳಲ್ಲಿ ಗೆಲುವು ಸಾಧಿಸಿದರೆ, ಜೆಡಿಎಸ್ 2 ಸ್ಥಾನ, ಪಕ್ಷೇತರ ಅಭ್ಯರ್ಥಿಯೊಬ್ಬರು ಗೆಲುವು ಸಾಧಿಸಿದ್ದಾರೆ. 2008ರ ಚುನಾವಣೆಯಲ್ಲಿ ಬಿಜೆಪಿ 36 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. 2013ರಲ್ಲಿ ಬಿಜೆಪಿ 13 ಸ್ಥಾನಗಳಲ್ಲಿ ಗೆದ್ದಿತ್ತು.

ಕೈಗೂಡದ ತಂತ್ರ: ಮುಂಬೈ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಬೇಕೆಂದು ಕಾಂಗ್ರೆಸ್ ಇನ್ನಿಲ್ಲದ ರಾಜಕೀಯ ರಣತಂತ್ರ ರೂಪಿಸಿತ್ತು. ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟಕ್ಕೆ ಮುಂಬೈ ಕರ್ನಾಟಕ ಭಾಗದಲ್ಲಿಯೇ ಜೀವ ತುಂಬಲಾಗಿತ್ತು. ಕಾಂಗ್ರೆಸ್ ಸಚಿವ ಎಂ.ಬಿ.ಪಾಟೀಲ, ವಿನಯ ಕುಲಕರ್ಣಿ ಮುಂದಾಳತ್ವ ವಹಿಸಿ ಮುಂಬೈ ಕರ್ನಾಟಕ ಭಾಗದಲ್ಲಿ ಲಿಂಗಾಯತ ಹೋರಾಟದ ಮೂಲಕ ಶಕ್ತಿ ಪ್ರದರ್ಶನ ಮಾಡಿದ್ದರು. ಆದರೆ ಈ ಭಾಗದ ಲಿಂಗಾಯತರು ಬಿಜೆಪಿ ಕೈ ಹಿಡಿದಿದ್ದಾರೆ.

ಸಿಎಂ ಕಣಕ್ಕಿಳಿದರೂ ಇಲ್ಲ ಪ್ರಯೋಜನ: ಲಿಂಗಾಯತ ಪ್ರತ್ಯೇಕ ಧರ್ಮದ ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪ್ರಭಾವವನ್ನೂ ಬಳಸಿಕೊಳ್ಳುವ ಯತ್ನ ಮಾಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬಾದಾಮಿಯಿಂದ ಕಣಕ್ಕಿಳಿಸಿದ್ದೇ ಆದಲ್ಲಿ ಮುಂಬೈ ಕರ್ನಾಟಕ ಭಾಗದಲ್ಲಿ ಇದರ ಪ್ರಭಾವ ಉಂಟಾಗಿ ಕಾಂಗ್ರೆಸ್ ಶಕ್ತಿ ವೃದ್ಧಿಸಲಿದೆ ಎನ್ನುವ ಲೆಕ್ಕಾಚಾರವೂ ಬುಡಮೇಲಾಗಿದೆ.

ಬಿಜೆಪಿ ಕೈಹಿಡಿಯಿತು ಮೋದಿ ಹವಾ: ಈ ಭಾಗದಲ್ಲಿ ಜಾತಿಗಿಂತ ಅಲೆಯೇ ಪ್ರಮುಖ ಪಾತ್ರ ವಹಿಸುತ್ತದೆ ಎನ್ನುವುದೂ ಮತ್ತೊಮ್ಮೆ ಸಾಬೀತಾಗಿದೆ. ಪ್ರಧಾನಿ ನರೇಂದ್ರ ಮೋದಿ ಈ ಭಾಗದಲ್ಲಿ ರ್‍ಯಾಲಿ ಹಮ್ಮಿಕೊಂಡಿದ್ದೇ ಬಿಜೆಪಿಗೆ ಆನೆ ಬಲ ಬರುವಂತೆ ಮಾಡಿತು. ಇದರೊಂದಿಗೆ ಮಹದಾಯಿ ವಿಚಾರದಲ್ಲಿ, ಬಿಜೆಪಿ ಅಧಿಕಾರಕ್ಕೆ ಬಂದರೆ ಆರೇ ತಿಂಗಳಲ್ಲಿ ಬಿಕ್ಕಟ್ಟು ಪರಿಹರಿಸುವುದಾಗಿ ಹೇಳಿದ್ದರೂ, ಈ ವಿಚಾರ ಸಹ ಬಿಜೆಪಿಗೆ ಪ್ಲಸ್ ಆಗಿದ್ದರಿಂದ ಮುಂಬೈ ಕರ್ನಾಟಕದಲ್ಲಿ ಬಿಜೆಪಿ ಹೆಚ್ಚಿನ ಸ್ಥಾನ ಗಿಟ್ಟಿಸಿಕೊಂಡಿದೆ.

26 ವಿಧಾನಸಭೆ ಮತಕ್ಷೇತ್ರಗಳ ಪೈಕಿ ಕಾಂಗ್ರೆಸ್‌ಗೆ 13, ಬಿಜೆಪಿ 9, ಜೆಡಿಎಸ್‌ಗೆ 4 ಸ್ಥಾನ

ಹೈದರಾಬಾದ್ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಅಧಿಕ ಸ್ಥಾನ

ಸ ಮಹಿಪಾಲರೆಡ್ಡಿ ಕಲಬುರಗಿ

ಹೈದರಾಬಾದ್ ಕರ್ನಾಟಕದ ಪ್ರಮುಖ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳ ಸುಮಾರು 26 ವಿಧಾನಸಭೆ ಮತಕ್ಷೇತ್ರಗಳ ಪೈಕಿ ಕಾಂಗ್ರೆಸ್ ಅಧಿಕ ಸ್ಥಾನಗಳನ್ನು ಪಡೆದರೆ, ಬಿಜೆಪಿ ಎರಡನೇ ಮತ್ತು ಜೆಡಿಎಸ್ ಮೂರನೇ ಸ್ಥಾನದಲ್ಲಿದೆ.

ಹೈ.ಕ.ಭಾಗವು ಕಾಂಗ್ರೆಸ್ ಭದ್ರಕೋಟೆ ಎಂದೇ ಬಿಂಬಿಸಲಾಗುತ್ತಿತ್ತು. ಅದನ್ನು ಕಾಯ್ದುಕೊಂಡು ಬಂದಿರುವ ಕಾಂಗ್ರೆಸ್ 13 ಕ್ಷೇತ್ರಗಳನ್ನು ತನ್ನದಾಗಿಸಿಕೊಂಡಿದೆ. ಬಿಜೆಪಿ 9 ಕ್ಷೇತ್ರಗಳನ್ನು ಗೆದ್ದುಕೊಂಡರೆ, ಜೆಡಿಎಸ್ 4 ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿದೆ.

ಜಿಲ್ಲೆಯಲ್ಲಿ ತಮ್ಮ ಪ್ರಾಬಲ್ಯ ಸಾಧಿಸಲು ಮೂರೂ ಪಕ್ಷಗಳ ದಿಗ್ಗಜರು ಹೈ.ಕ.ಪ್ರದೇಶದಲ್ಲಿ ಪ್ರಚಾರ ಕೈಗೊಂಡಿದ್ದರು. ಆದರಲ್ಲಿ ಬಿಜೆಪಿ ಪರವಾಗಿ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರು ಸೇರಿದಂತೆ ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ, ಜೆಡಿಎಸ್ ಪಕ್ಷದ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಸೇರಿದಂತೆ ಅನೇಕರು ಬಂದುಹೋಗಿದ್ದಾರೆ.

ಕೈ ಮೇಲುಗೈ: ಬೀದರ್ ಜಿಲ್ಲೆಯಲ್ಲಿರುವ 6 ಕ್ಷೇತ್ರಗಳ ಪೈಕಿ 4 ಕಾಂಗ್ರೆಸ್, 1 ಬಿಜೆಪಿ ಮತ್ತು 1 ಜೆಡಿಎಸ್ ಸ್ಥಾನ ಪಡೆದಿದೆ. ಕಲಬುರಗಿ ಜಿಲ್ಲೆಯ 9 ಕ್ಷೇತ್ರದಲ್ಲಿ 5 ರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಚಿಂಚೋಳಿಯಲ್ಲಿ ಡಾ.ಉಮೇಶ ಜಾಧವ, ಜೇವರ್ಗಿಯಲ್ಲಿ ಡಾ.ಅಜಯಸಿಂಗ್, ಚಿತ್ತಾಪುರದಲ್ಲಿ ಪ್ರಿಯಾಂಕ್ ಖರ್ಗೆ, ಅಫಜಲಪುರದಲ್ಲಿ ಎಂ.ವೈ.ಪಾಟೀಲ, ಕಲಬುರಗಿ ಉತ್ತರದಲ್ಲಿ ಕನೀಜ್ ಫಾತಿಮಾ ಗೆದ್ದಿದ್ದಾರೆ. ಯಾದಗಿರಿ ಜಿಲ್ಲೆಯಲ್ಲಿರುವ 4 ಸ್ಥಾನಗಳ ಪೈಕಿ ಒಂದು ಸ್ಥಾನವನ್ನು ಕಾಂಗ್ರೆಸ್ ಗೆದ್ದಿದೆ. ಶಹಾಪುರ ಕ್ಷೇತ್ರದಲ್ಲಿ ಮಾಜಿ ಸಚಿವ ಶರಣಬಸಪ್ಪ ದರ್ಶನಾಪುರ ಗೆಲುವು ಸಾಧಿಸಿದ್ದಾರೆ.ರಾಯಚೂರಿನಲ್ಲಿ 7 ಕ್ಷೇತ್ರಗಳಲ್ಲಿ ಮೂರು ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ. ರಾಯಚೂರು ಗ್ರಾಮೀಣದಲ್ಲಿ ಬಸನಗೌಡ ದದ್ದಲ, ಮಸ್ಕಿಯಲ್ಲಿ ಪ್ರತಾಪಗೌಡ ಪಾಟೀಲ, ಲಿಂಗಸೂಗೂರದಲ್ಲಿ ದುರ್ಗಪ್ಪ ಹುಲಿಗೇರಿ ಜಯಗಳಿಸಿದ್ದಾರೆ.

ಅರಳಿದ ಕಮಲ: ಬೀದರ ಜಿಲ್ಲೆಯ ಔರಾದ್‌ನಲ್ಲಿ ಹಾಲಿ ಶಾಸಕ ಪ್ರಭು ಚವ್ಹಾಣ್ ಗೆಲುವು ಸಾಧಿಸಿದರೆ, ಕಲಬುರಗಿ ಜಿಲ್ಲೆಯ ಸೇಡಂನಲ್ಲಿ ರಾಜಕುಮಾರ ಪಾಟೀಲ ತೆಲ್ಕೂರ, ಕಲಬುರಗಿ ಗ್ರಾಮೀಣದಲ್ಲಿ ಬಸವರಾಜ ಮತ್ತಿಮುಡು, ದಕ್ಷಿಣದಲ್ಲಿ ದತ್ತಾತ್ರೇಯ ಪಾಟೀಲ ರೇವೂರ, ಆಳಂದ ಕ್ಷೇತ್ರದಲ್ಲಿ ಸುಭಾಷ ಗುತ್ತೇದಾರ ಯಶ ಕಂಡಿದ್ದಾರೆ. ಯಾದಗಿರಿ ಕ್ಷೇತ್ರದಲ್ಲಿ ವೆಂಕಟರೆಡ್ಡಿ ಮುದ್ನಾಳ, ಸುರಪುರದಲ್ಲಿ ರಾಜುಗೌಡ, ರಾಯಚೂರು ನಗರದಲ್ಲಿ ಡಾ.ಶಿವರಾಜ ಪಾಟೀಲ, ದೇವದುರ್ಗ ಕ್ಷೇತ್ರದಲ್ಲಿ ಶಿವನಗೌಡ ನಾಯಕ ಬಿಜೆಪಿಯನ್ನು ಗೆಲ್ಲಿಸಿದ್ದಾರೆ.

19 ಕ್ಷೇತ್ರಗಳಲ್ಲಿ 16 ಕ್ಷೇತ್ರ ಗೆದ್ದು ಬೀಗಿದ ಬಿಜೆಪಿ ಕಾಂಗ್ರೆಸ್‌ಗೆ ಒಂದು ಸ್ಥಾನ

ಹಿಂದುತ್ವ, ಮೋದಿ ಸುನಾಮಿಗೆ ಕೊಚ್ಚಿ ಹೋದ ಕಾಂಗ್ರೆಸ್

ಸ ಜಿತೇಂದ್ರ ಕುಂದೇಶ್ವರ ಮಂಗಳೂರು

ಕರಾವಳಿಯಲ್ಲಿ ಎದ್ದ ಹಿಂದುತ್ವ ಮತ್ತು ಮೋದಿ ಅಲೆಯ ಸುನಾಮಿಯಲ್ಲಿ ಕಾಂಗ್ರೆಸ್ ಕೊಚ್ಚಿ ಹೋಗಿದೆ. ಕರಾವಳಿ ಕರ್ನಾಟಕದ 19 ಕ್ಷೇತ್ರಗಳಲ್ಲಿ ಬಿಜೆಪಿ 16 ಕ್ಷೇತ್ರಗಳನ್ನು ಗೆದ್ದು ಜಯಭೇರಿ ಬಾರಿಸಿದೆ.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಮಿಂಚಿನ ಸಂಚಾರ ನಡೆಸಿದಾಗ ಬಹಿರಂಗ ಸಭೆಗಳಿಗೆ ಸಹಸ್ರಾರು ಸಂಖ್ಯೆಯಲ್ಲಿ ಜನ ಸೇರಿದ್ದರು. ಕರಾವಳಿಯಲ್ಲಿ ನಡೆದ ಹಿಂದೂ ಕಾರ್ಯಕರ್ತರ ಕೊಲೆ, ಇದರಿಂದ ಎದ್ದ ಆಕ್ರೋಶದ ಉರಿಗೆ ಮೋದಿ ಅವರ ಪ್ರವಾಸವು ಗಾಳಿಯಂತೆ ಬೀಸಿ ಹಿಂದುತ್ವ, ಅಲೆ ಅಲೆಯಾಗಿ ಬೀಸಿ ಬಿಜೆಪಿ ಎಲ್ಲೆಡೆ ಗೆಲ್ಲುವಂತೆ ಮಾಡಿದೆ.

ಕಳೆದ ಬಾರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಟರಲ್ಲಿ ಕೇವಲ ಒಂದು ಸ್ಥಾನ ಪಡೆದಿದ್ದ ಬಿಜೆಪಿ, ಈ ಬಾರಿ 7 ಸ್ಥಾನಗಳನ್ನು ಗೆದ್ದು ಕಾಂಗ್ರೆಸ್‌ಗೆ ಒಂದೇ ಒಂದು ಸ್ಥಾನ ನೀಡುವ ಮೂಲಕ ಪ್ರತೀಕಾರ ಸಾಧಿಸಿದೆ.

ದಕ್ಷಿಣ ಕನ್ನಡದಲ್ಲಿ ಅರಣ್ಯ ಸಚಿವ, ಕಾಂಗ್ರೆಸ್ ನಾಯಕ ರಮಾನಾಥ ರೈ ಅವರನ್ನು ಬಿಜೆಪಿಯ ರಾಜೇಶ್ ನಾಯ್ಕ್ ಸೋಲಿಸುವ ಮೂಲಕ ದೈತ್ಯ ಸಂಹಾರಿ ಎನಿಸಿಕೊಂಡಿದ್ದಾರೆ. ಉಳಿದಂತೆ ಕಳೆದ ಬಾರಿ ಬಿಜೆಪಿ ಮಾನ ಉಳಿಸಿದ್ದ ಸುಳ್ಯದ ಅಂಗರ ಈ ಬಾರಿಯೂ ಗೆಲುವು ಸಾಧಿಸಿದ್ದಾರೆ. ಆಹಾರ ಸಚಿವ ಯು.ಟಿ.ಖಾದರ್ ಗೆಲ್ಲುವ ಮೂಲಕ ಕಾಂಗ್ರೆಸಿನ ಮಾನ ಉಳಿಸಿದ್ದಾರೆ. ಮಾಜಿ ಸಚಿವ ಅಭಯಚಂದ್ರ ಜೈನ್ ಬಿಜೆಪಿಯ ಉಮಾನಾಥ್ ಕೋಟ್ಯಾನ್ ಎದುರು ಸೋಲೊಪ್ಪಿಕೊಂಡಿದ್ದಾರೆ. ಸುರತ್ಕಲ್‌ನಲ್ಲಿ 26,648 ಅಂತರದಿಂದ ಜನಪ್ರಿಯ ವೈದ್ಯ ಡಾ.ವೈ.ಭರತ್ ಶೆಟ್ಟಿ ಅವರು ಕಾಂಗ್ರೆಸ್ ಶಾಸಕ ಮೊಯ್ದಿನ್ ಬಾವ ಅವರನ್ನು ನೆಲಕಚ್ಚಿಸಿದ್ದಾರೆ.

ಉಡುಪಿಯಲ್ಲಿ ಯಾತ್ರೆ ಮುಂದುವರಿಕೆ: ಉಡುಪಿಯಲ್ಲಿ ಹಾಲಾಡಿ ಶ್ರೀನಿವಾಸ ಶೆಟ್ಟಿ ಜೈತ್ರ ಯಾತ್ರೆ ಮುಂದುವರಿದಿದೆ. ಇವರು ದಾಖಲೆಯ 56,405 ಮತಗಳಿಂದ ಗೆದ್ದಿದ್ದಾರೆ. ಇವರ ಪ್ರಭಾವದಿಂದ ಬೈಂದೂರು ಗೆಲ್ಲಲು ಬಿಜೆಪಿಗೆ ನೆರವಾಗಿದೆ. ಉಡುಪಿ ಕ್ಷೇತ್ರದಲ್ಲಿ ಬಿಜೆಪಿಯ ರಘುಪತಿ ಭಟ್ ಗೆದ್ದಿದ್ದಾರೆ. ಕಾರ್ಕಳದಲ್ಲಿ ನಿರೀಕ್ಷೆಯಂತೆ ಸುನಿಲ್ ಕುಮಾರ್, ಕಾಪು ಕ್ಷೇತ್ರದಲ್ಲಿ ಮೊಗವೀರ ಮುಖಂಡ ಲಾಲಾಜಿ ಮೆಂಡನ್ ಗೆಲ್ಲುವ ಮೂಲಕ 5-0ಯಿಂದ ಕಾಂಗ್ರೆಸನ್ನು ಬಿಜೆಪಿ ಮಣಿಸಿದೆ.

ಉತ್ತರ ಕನ್ನಡದಲ್ಲೂ ಕೈಗೆ ಸೋಲು: ಉತ್ತರ ಕನ್ನಡದಲ್ಲಿ ಕಾಂಗ್ರೆಸ್ ಸೋತು ನೆಲಕಚ್ಚಿದೆ. ಇಲ್ಲಿ ಗೆದ್ದ ಇಬ್ಬರು ಕಾಂಗ್ರೆಸಿಗರು ಪಕ್ಷ ಬಲದ ಹೊರತಾಗಿ ತಮ್ಮ ವೈಯಕ್ತಿಕ ವರ್ಚಸ್ಸಿಂದ ಗೆದ್ದಿದ್ದಾರೆ. ಯಲ್ಲಾಪುರದಿಂದ ಶಿವರಾಮ ಹೆಬ್ಬಾರ್ ಹಿಂದೆ ಬಿಜೆಪಿ ತೊರೆದು ದೇಶಪಾಂಡೆ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದವರು. ಇಬ್ಬರೂ ಕಾಂಗ್ರೆಸ್‌ನಿಂದ ಗೆದ್ದಿದ್ದಾರೆ. ವಿಶ್ವೇಶ್ವರ ಹೆಗಡೆ ಕಾಗೇರಿ ಗೆಲುವು ಸಾಧಿಸಿದ್ದಾರೆ. ಭಟ್ಕಳದಲ್ಲಿ ಅಚ್ಚರಿ ಎಂಬಂತೆ ಸುನಿಲ್ ನಾಯ್ಕ್, ಕಾರವಾರದಲ್ಲಿ ರೂಪಾಲಿ ನಾಯ್ಕ್ ಗೆದ್ದಿದ್ದಾರೆ.

26 ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ 13 ಸ್ಥಾನ
ಚಿನ್ನದ ನಾಡು ಕೆಜಿಎಫ್ ಕೂಡ ಕಾಂಗ್ರೆಸ್ ಪಾಲು



ಬೆಂಗಳೂರು ವಿಭಾಗದಲ್ಲಿ ಕೈ-ಕಮಲಕ್ಕೆ ಮಿಶ್ರ ಫಲಿತಾಂಶ

ಸ ಸಿದ್ದು / ಜಯರಾಮ್ ಬೆಂಗಳೂರು

ಬೆಂಗಳೂರು, ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್ ಚೇತರಿಕೆ ಕಂಡಿದೆ. ಅತ್ತ ಕೋಲಾರದಲ್ಲಿ ಕಮಲ ಪಾಳೆಯ ಒಂದೂ ಸ್ಥಾನವನ್ನು ಗಳಿಸಿಲ್ಲ. ಆದರೆ ತುಮಕೂರಿನಲ್ಲಿ ಬಿಜೆಪಿ ಬಲ ಹೆಚ್ಚಿಸಿಕೊಂಡಿದೆ. ರಾಮನಗರದಲ್ಲಿ ಜೆಡಿಎಸ್ ಹೆಚ್ಚು ಸ್ಥಾನ ಗಳಿಸಿದೆ.

ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರದಲ್ಲಿ ಜಯನಗರ, ರಾಜರಾಜೇಶ್ವರಿ ನಗರ ಹೊರತುಪಡಿಸಿ 26 ಕ್ಷೇತ್ರದಲ್ಲಿ ಕಾಂಗ್ರೆಸ್ 13 , ಬಿಜೆಪಿ 11, ಜೆಡಿಎಸ್ 2 ಸ್ಥಾನಗಳಿಸಿವೆ.

ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್ ಪಾರಮ್ಯ: ಚಿಕ್ಕಬಳ್ಳಾಪುರ ಜಿಲ್ಲೆಯ 5 ಕ್ಷೇತ್ರಗಳ ಪೈಕಿ 4ರಲ್ಲಿ ಕಾಂಗ್ರೆಸ್ ಗೆಲುವುಗಳಿಸಿದ್ದು, ಜೆಡಿಎಸ್ ಒಂದು ಸ್ಥಾನ ಪಡೆಯಲಷ್ಟೇ ಸಾಧ್ಯವಾಗಿದೆ. ಗೌರಿಬಿದನೂರು, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಹಾಗೂ ಶಿಡ್ಲಘಟ್ಟದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ್ದು, ಚಿಂತಾಮಣಿಯಲ್ಲಿ ಜೆಡಿಎಸ್ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.

ರಾಮನಗರದಲ್ಲಿ ಜೆಡಿಎಸ್ ಚೇತರಿಕೆ: ರಾಮನಗರದ 4 ಸ್ಥಾನದಲ್ಲಿ ಜೆಡಿಎಸ್ 3 ಸ್ಥಾನಗಳಿಸಿ ಸಾಧನೆ ಮಾಡಿದೆ. ಕನಕಪುರದಲ್ಲಿ ಇಂಧನ ಸಚಿವ ಡಿ.ಕೆ.ಶಿವಕುಮಾರ್ ದಾಖಲೆ ಮತಗಳ ಅಂತರದಿಂದ ಜಯಗಳಿಸಿದ್ದಾರೆ. ರಾಮನಗರ, ಚನ್ನಪಟ್ಟಣದಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ವಿಜೇತರಾಗಿದ್ದಾರೆ. ಪ್ರಸಕ್ತ ಚುನಾವಣೆಯಲ್ಲಿ ಜೆಡಿಎಸ್ ಮೂರು ಸ್ಥಾನಗಳನ್ನು ಕಬಳಿಸಿ, ಚೇತರಿಕೆ ಕಂಡಿದೆ.

**ತುಮಕೂರಲ್ಲಿ ಬಲ ಹೆಚ್ಚಿಸಿಕೊಂಡ ಬಿ